ಓ.ಎಸ್. ನಂ. 82/2015

ಪಿ.ಡಬ್ಲ್ಯು: 01 (ದೊಡ್ಡಮ್ಮ)

ದಿನಾಂಕಃ 13.02.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ – ಶ್ರೀ HGR ವಕೀಲರಿಂದ.

ನನ್ನ ತಂದೆಯ ಹೆಸರು ಬಡಸೂರಯ್ಯ. ನನ್ನ ತಾತನ ಹೆಸರು ಚಿನ್ನಯ್ಯಗಾರಿ ಚಿನ್ನಯ್ಯ ಆಗಿರುತ್ತದೆ. ಆತನಿಗೆ ಅಣ್ಣ ತಮ್ಮಂದಿರು ಇರಲಿಲ್ಲ. ಸಾಕ್ಷಿ ಮುಂದುವರೆದು ತಾತನಿಗೆ ಅಣ್ಣ ತಮ್ಮಂದಿರು ಇರಬಹುದು ಅವರ ಹೆಸರು ನನಗೆ ಗೊತ್ತಿಲ್ಲ. ಈ ದಾವೆಯನ್ನು ಸಲ್ಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಾನು ದಾವೆಯಲ್ಲಿ ಹಾಗೂ ಪ್ರಮಾಣ ಪತ್ರದಲ್ಲಿ ನನ್ನ ತಾತನ ಅಣ್ಣ ತಮ್ಮಂದಿರ ಬಗ್ಗೆ ಬರೆಸಿದ್ದು ಅದರ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಸರ್ವೆ ನಂಬರ್ ನನಗೆ ಹೇಳಲಾಗುವುದಿಲ್ಲ. ಎಷ್ಟು ಸರ್ವೆ ನಂಬರಗಳಿಗೆ ಸಂಬಂಧಪಟ್ಟಂತೆ ದಾವೆ ಹೂಡಿದ್ದೇನೆ ಎಂದರೆ ನನಗೆ ಗೊತ್ತಾಗುವುದಿಲ್ಲ.

ನನ್ನ ತಾತನ ಆಸ್ತಿಯಲ್ಲಿ ಭಾಗವನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತೇನೆ. ಪಾಲಯ್ಯ, ಈರಯ್ಯ ಮತ್ತು ಮೂಕ ಪಾಲಯ್ಯ ಅವರ ವಿರುದ್ದ ಮಾತ್ರ ದಾವೆಯನ್ನು ಸಲ್ಲಿಸಿರುತ್ತೇನೆ, ಉಳಿದವರನ್ನು ಸೇರಿಸಿರುವುದಿಲ್ಲ. ಸದರಿಯವರುಗಳು ಈಗ ಜೀವಂತ ಇರುವುದಿಲ್ಲ. ಈಗ ಅವರ ಮಕ್ಕಳ ವಿರುದ್ದ ದಾವೆಯನ್ನು ಮುಂದುವರೆಸುತ್ತಿದ್ದೇನೆ. ದೊಡ್ಡ ಪಾಲಯ್ಯ, ಸಣ್ಣ ಪಾಲಯ್ಯ ಮತ್ತು ಪಾಪಯ್ಯ ಇವರುಗಳು ನನ್ನ ಅಣ್ಣನ ಮಕ್ಕಳಾಗಿದ್ದು ಅವರ ವಿರುದ್ದ ದಾವೆಯನ್ನು ಮುಂದುವರೆಸುತ್ತಿದ್ದೇನೆ.

ಈರಯ್ಯನಿಗೆ ಒಟ್ಟು 8 ಜನ ಮಕ್ಕಳು ಇರುತ್ತಾರೆ. ಈರಯ್ಯನ ತಾತನ ಹೆಸರು ಮೂಕಪಾಲಯ್ಯ. ಮೂಕಪಾಲಯ್ಯ ಅವರ ಅಣ್ಣ ತಮ್ಮಂದಿರನ್ನು ಹೇಳಲು ಆಗುವುದಿಲ್ಲ. ನಾನು ದಾವೆಯನ್ನು ದಾಖಲು ಮಾಡುವಾಗ ತಾತನ ಅಣ್ಣ ತಮ್ಮಂದಿರ ಹೆಸರನ್ನು ವಕೀಲರಿಗೆ ಹೇಳಿ ಬರೆಸಿರುತ್ತೇನೆ. ನನ್ನ ತಾಯಿಯ ಹೆಸರು ದೊಡ್ಡ ಬೋರಮ್ಮ. ಈರಯ್ಯ, ಮೂಕಪಾಲಯ್ಯ ಮತ್ತು ಪೆದ್ದ ಓಬಯ್ಯ ಅವರುಗಳು ನನ್ನ ಚಿಕ್ಕಪ್ಪ, ದೊಡ್ಡಪ್ಪನ ಮಕ್ಕಳು, ಅಂದರೆ ನನ್ನ ಅಣ್ಣಂದಿರು. ಅವರ ಮಕ್ಕಳ ವಿರುದ್ದವೇ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ. ಈರಯ್ಯ, ಮೂಕಪಾಲಯ್ಯ ಮತ್ತು ಪೆದ್ದ ಓಬಯ್ಯ ನನ್ನ ತಾಯಿಯ ಅಣ್ಣ ತಮ್ಮಂದಿರಾದ ಕಾರಣ ಅವರಿಗೆ ನನ್ನ ತಾಯಿ ದಾನಪತ್ರ ಬರೆದುಕೊಟ್ಟಿದ್ದಾರೆ ಎಂದರೆ ನಾವು ಸಹಿ ಹಾಕಿರುವುದಿಲ್ಲ, ನನ್ನ ತಾಯಿ ಬರೆದುಕೊಟ್ಟಿರಬಹುದು. ನನ್ನ ತಾಯಿಗೆ ಗಂಡು ಮಕ್ಕಳಿಲ್ಲದ ಕಾರಣ ನನ್ನ ತಂದೆಯ ಅಣ್ಣನ ಮಕ್ಕಳಿಗೆ ನನ್ನ ತಾಯಿ ದಾನಪತ್ರವನ್ನು ಬರೆದುಕೊಟ್ಟಿದ್ದರು ಎಂದರೆ ಇರಬಹುದು, ಆದರೆ ಅದಕ್ಕೆ ನಮ್ಮ ಒಪ್ಪಿಗೆ ಇಲ್ಲ. ನನ್ನ ತಂದೆಯ ಮರಣದ ನಂತರ

ಓ.ಎಸ್. ನಂ. 82/2015

ಪಿ.ಡಬ್ಲ್ಯು: 01 (ದೊಡ್ಡಮ್ಮ)

ಈ ರೀತಿ ದಾನಪತ್ರವನ್ನು ಬರೆದುಕೊಟ್ಟಿದ್ದರು ಎಂದರೆ ಅದಕ್ಕೆ ನಮ್ಮ ಒಪ್ಪಿಗೆ ಇಲ್ಲ. 1959 ರಲ್ಲಿ ವಿಭಾಗವಾದ ನಂತರ ನನ್ನ ತಾಯಿ ದಾನಪತ್ರವನ್ನು ಬರೆದುಕೊಟ್ಟಿದ್ದರು ಎಂದರೆ ಇರಬಹುದು ಅದಕ್ಕೆ ನಮ್ಮ ಒಪ್ಪಿಗೆ ಇಲ್ಲ. ಆ ಸಮಯದಲ್ಲಿ ನನ್ನ ತಂದೆ ಮೃತಪಟ್ಟಿದ್ದರು ಎಂದರೆ ಹೌದು. ನನ್ನ ತಂದೆಗೆ ಬಂದ ಭಾಗದ ಆಸ್ತಿಗಳನ್ನು ದಾನಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಇರಬಹುದು. ಅದು ದಾವಾ ಆಸ್ತಿಗಳಲ್ಲಿ ¼ ಭಾಗ ಎಂದರೆ ಇರಬಹುದು. ದಾನಪತ್ರ ಬರೆದುಕೊಟ್ಟ ನಂತರ ಅವರುಗಳೇ ಅದನ್ನು ಉಳುಮೆ ಮಾಡುತ್ತಿದ್ದಾರೆ ಎಂದರೆ ಹೌದು. ದಾನಪತ್ರ ಬರೆದುಕೊಟ್ಟಾಗಲೇ ಆ ಬಗ್ಗೆ ನನಗೆ ಗೊತ್ತಿತ್ತು ಎಂದರೆ ದಾನಪತ್ರವನ್ನು 30 ವರ್ಷಗಳ ಹಿಂದೆಯೇ ಬರೆಸಿರುತ್ತಾರೆ. 2 ಮತ್ತು 3 ನೇ ವಾದಿಗಳು ನನ್ನ ಅಕ್ಕನ ಮಕ್ಕಳು. ನನ್ನ ಮಗಳನ್ನು ಪೆದ್ದ ಓಬಯ್ಯನ ಮಗ ಪಾಲಯ್ಯನಿಗೆ ಮದುವೆ ಮಾಡಿಕೊಡಲಾಗಿದೆ. ಆತ ಈಗ ಈ ದಾವೆಯಲ್ಲಿ 13 ನೇ ಪ್ರತಿವಾದಿಯಾಗಿರುತ್ತಾನೆ. ಪ್ರತಿವಾದಿ 14-17 ನನ್ನ ಅಳಿಯ ಪಾಲಯ್ಯ ಅಕ್ಕ ತಂಗಿಯರು. ದಾನಪತ್ರವನ್ನು ರದ್ದು ಮಾಡಲು ನಾನು ಯಾವುದೇ ಕ್ರಮವನ್ನು ಈವರೆಗೂ ತೆಗೆದುಕೊಂಡಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.